# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.3155/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24.3.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಪೀತಾಂಬರ ಆಂಜನೇಯಸ್ವಾಮಿ ದೇವಸ್ಥಾನದ ಪೂರ್ವ ದಿಕ್ಕಿನಲ್ಲಿರುವ ಸ.296ರ ಸಾರ್ವಜನಿಕ ಸ್ವತ್ತನ್ನು ಕುಂಬಾರ ರಾಮಯ್ಯ ಅಥವಾ ಇತರರು ಅತಿಕ್ರಮಿಸಿದ್ದು ಕಂಡುಬಂದರೆ ಅದನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಡಿ.ಎಂ.ನಾರಾಯಣಸ್ವಾಮಿ, ದೇವನಹಳ್ಳಿಯ ನಿವಾಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ನಾಗರಾಜು, ಮುಖ್ಯಾಧಿಕಾರಿಗಳು, ಪುರಸಭೆ, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು, ದೇನಹಳ್ಳಿ ಕಸಬಾಗೆ ಸೇರಿದ ಸರ್ವೆ ನಂ.295/1, 295/2, 300, 299, 293, 294 ಮತ್ತು 296 ಜಮೀನುಗಳ ಮಧ್ಯೆ ಇರುವ ರಾಜಕಾಲುವೆಯ ರಸ್ತೆ ಮಧ್ಯದಲ್ಲಿ ಪುರಸಭೆಯವರು ನಿರ್ಮಿಸುತ್ತಿದ್ದ ಮೋರಿ ಕೆಲಸದ ಟೆಂಡರನ್ನು ಜಿಲ್ಲಾಧಿಕಾರಿಗಳು ದಿ.31.12.2014ರಂದು ಅವೈಜ್ಞಾನಿಕವಾಗಿದೆಯೆಂದು ರದ್ದುಪಡಿಸಿರುತ್ತಾರೆ. ಈ ರಾಜಕಾಲುವೆಯನ್ನು ಅತಿಕ್ರಮಿಸಿದ ಅಕ್ಕಪಕ್ಕದವರಿಗೆ ಒತ್ತುವರಿ ತೆರವುಗೊಳಿಸುವವರೆಗೆ ಕಾಮಗಾರಿ ಮಾಡಬಾರದೆಂದು ಮತ್ತು ಈ ಬಗ್ಗೆ ಉಚ್ಚ ನ್ಯಾಯಾಲಯವು 296ರ ಜಮೀನನ್ನು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿರುತ್ತದೆ. ಸರ್ವೆ ನಂ.296ರ ರಾಜಕಾಲುವೆಯಲ್ಲಿ ಮತ್ತು ಮುಜರಾಯಿ ಇಲಾಖೆಯ ಪೀತಾಂಬರ ಆಂಜನೇಯಸ್ವಾಮಿ ದೇವಸ್ಥಾನದ ಪೂರ್ವದಲ್ಲಿರುವ ಕಲ್ಯಾಣಿಗೆ

ಹೊಂದಿಕೊಂಡು ಅಕ್ರಮವಾಗಿ ಶ್ರೀಮತಿ ಸೈದಾನಮ್ಮ ಎನ್ನುವವರು ಕಟ್ಟಿದ ಮನೆಯ ಪಕ್ಕದಲ್ಲೇ ಅಕ್ರಮವಾಗಿ ಕಟ್ಟಿ ವಾಸವಿರುವ ಕುಂಬಾರರಾಮಯ್ಯ ಅವರು ಖರೀದಿಮಾಡಿ ಅದರ ಒಂದು ಭಾಗವನ್ನು ಸಹ ಕೆಡವಿ ಪಕ್ಕ ಆರ್.ಸಿಸಿ ಮನೆ ಕಟ್ಟಲು ದೇವನಹಳ್ಳಿ ಪುರಸಭೆಯವರು ಪರವಾನಿಗೆ ನೀಡಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಎದುರುದಾರರಿಗೆ ಹಾಗೂ ಮುಜರಾಯಿ ಇಲಾಖೆಯವರಿಗೆ ಪತ್ರ ಬರೆದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಈ ಅಕ್ರಮ ಕಟ್ಟಡ ತೆರವುಗೊಳಿಸಿ ಎದುರುದಾರರ ವಿರುಧ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪೀತಾಂಬರ ಆಂಜನೇಯಸ್ವಾಮಿ ದೇವಸ್ಥಾನದ ಪೂರ್ವದಲ್ಲಿರುವ ಕಲ್ಯಾಣಿಪಕ್ಕದಲ್ಲಿ ಕುಂಬಾರ ರಾಮಯ್ಯನವರಿಗೆ ಸೇರಿದ ಹಂಚಿನ ಮನೆಯಿರುತ್ತದೆ. ಸದರಿಯವರು ಮನೆಯ ದುರಸ್ತಿ ಕಾರ್ಯ ಮಾಡುವ ಬಗ್ಗೆ ಅಥವಾ ರಿಪೇರಿ ಕೆಲಸಕ್ಕೆ ಕಛೇರಿಯಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ಕಟ್ಟಡ ಕಟ್ಟಲು ಅವರಿಗೆ ಪರವಾನಿಗೆ ನೀಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೇವನಹಳ್ಳಿ ಪುರಸಭೆಯವರು ರಾಜಕಾಲುವೆಯನ್ನು ಅವೈಜ್ಞಾನಿಕವಾಗಿ ನಿರ್ಮಿಸುತ್ತಿದ್ದು, ಆ ಬಗ್ಗೆ ಟೆಂಡರನ್ನುಮಾನ್ಯ ಜಿಲಾಧಿಕಾರಿಗಳು 31.12.2014ರಂದು ರದ್ದುಗೊಳಿಸಿದ್ದು ಇರುತ್ತದೆ. ಆದರೆ ದೂರುದಾರರು ಇದನ್ನು ರದ್ದುಗೊಳಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

6. ಈ ರಾಜಕಾಲುವೆ ಅತಿಕ್ರಮಿಸಿ ಕುಂಬಾರ ರಾಮಯ್ಯ ಎನ್ನುವವರು ತಮ್ಮ ಹಂಚಿನ ಮನೆಯನ್ನು ಕೆಡವಿ ಆರ್.ಸಿಸಿ ಮನೆಯನ್ನು ನಿರ್ಮಿಸಿದ್ದಾರೆ ಆದರೆ ಅದಕ್ಕೆ ಪುರಸಭೆಯವರು ಯಾವುದೇ ಪರವಾನಿಗೆ ನೀಡಿರುವುದಿಲ್ಲ ಹಾಗೂ ಈ ಅಕ್ರಮ ಕಟ್ಟಡವನ್ನು ತಡೆಗಟ್ಟಲು ಅರ್ಜಿ ಸಲ್ಲಿಸಿದರೂ ಸಹಾ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಆದರೆ, ಎದುರುದಾರರು ರಾಜಕಾಲುವೆ ಪಕ್ಕ ಕುಂಬಾರ ರಾಮಯ್ಯನ ಹಂಚಿನ ಮನೆ ಇದ್ದು ಅದರ ರಿಪೇರಿಗೆ ಅಥವಾ ಕಟ್ಟಡ ಕಟ್ಟಲು ಪರವಾನಿಗೆ ಪಡೆದಿಲ್ಲವೆಂದು ತಿಳಿಸಿರುತ್ತಾರೆ.

7. ಶ್ರೀ ಪೀತಾಂಬರ ಆಂಜನೇಯಸ್ವಾಮಿ ದೇವಸ್ಥಾನವು ಇದೇ ಜಾಗದಲ್ಲಿದ್ದು, ಈ ದೇವಾಲಯದ ಜಾಗವನ್ನು ಅನಧಿಕೃತವಾಗಿ ಬೇರೆಯವರು ಅತಿಕ್ರಮಿಸಿದ್ದಾರೆಂದು ಆ ಬಗ್ಗೆ ಸಹಾಯಕ ಆಯುಕ್ತರು ಧಾರ್ಮಿಕ ಮತ್ತು ದತ್ತಿ ಇಲಾಖೆಯವರು, ತಹಶೀಲ್ದಾರ್, ದೇವನಹಳ್ಳಿ ಅವರಿಗೆ ಪತ್ರ ಬರೆದಿರುತ್ತಾರೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಪೀತಾಂಬರ ಆಂಜನೇಯಸ್ವಾಮಿ ದೇವಸ್ಥಾನದ ಪೂರ್ವ ದಿಕ್ಕಿನಲ್ಲಿರುವ ಸರ್ವೆ ನಂ..296ರ ಸಾರ್ವಜನಿಕ ಸ್ವತ್ತನ್ನು ಕುಂಬಾರ ರಾಮಯ್ಯ ಅಥವಾ ಇತರರು ಅತಿಕ್ರಮಿಸಿದ್ದು ಕಂಡುಬಂದರೆ ಅದನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 24/3/17

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

23/3